ಅ) ಮೇಲ್ಕಂಡ ಕಟ್ಟಡ ಅರ್ಧಕ್ಕೆ ನಿಂತು ಅನೇಕ ವರ್ಷಗಳಾಗಿದ್ದು ಈಗ ದವಾಖಾನಿ ಚಾವಡಿಯಲ್ಲಿ ನಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ, ಆರೋಗ್ಯ ಕೇಂದ್ರ ಘಟಕವನ್ನು ದವಾಖಾನೆ ಚಾವಡಿಯಿಂದ ಹೊಸ ಕಟ್ಟಡಕ್ಕೆ ಯಾವಾಗ ಸ್ಥಳಾಂತರಿಸಲಾಗುವುದು?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಮಾನ್ಯ ಆರೋಗ್ಯ ಮಂತ್ರಿಗಳು). —

ಅ) ದಿನಾಂಕ ೧೩-೧೦-೧೯೭೮ ರಿಂದ ಪ್ರಾರಂಭವಾಗಿದೆ.

ಆ) ಬಂದಿದೆ.

ಇ) ಲೋಕೋಪಯೋಗಿ ಇಲಾಖೆಯವರನ್ನು ಕಟ್ಟಡವನ್ನು ಶೀಘ್ರವಾಗಿ ಪೂರ್ಣಗೊಳಿಸುವಂತೆ ಕೇಳಿಕೊಳ್ಳಲಾಗಿದೆ. ಕಟ್ಟಡವನ್ನು ಇಲಾಖೆಯ ವಶಕ್ಕೆ ಒಪ್ಪಿಸಿದ ಕೂಡಲೇ ಸ್ಥಳಾಂತರಿಸಲಾಗುವುದು.

ತಾಲ್ಲೂಕು ಅಭಿವೃದ್ಧಿ ಮಂಡಳಿಯಿಂದ ತೆಗೆದುಕೊಂಡ ದವಾಖಾನೆಗಳ ಸಿಬ್ಬಂದಿ ಕುರಿತು.

೬೯. ಶ್ರೀ ಜ್ಞಾನದೇವಪ್ಪ ಡೊಡ್ಡಮೇಟಿ (ರೋಣ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ತಾಲ್ಲೂಕು ಅಭಿವೃದ್ಧಿ ಮಂಡಳಿಗಳಿಂದ ವಹಿಸಿಕೊಂಡ ದವಾಖಾನೆಗಳ ಸಿಬ್ಬಂದಿಯ ವಿಷಯವು ಪರಿಶೀಲನಾ ಸಮಿತಿಯ ಮುಂದೆ ಇರುವುದು ನಿಜವೇ,

ಆ) ಸದರಿ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿದೆಯೆ,

ಇ) ಹಾಗಿದ್ದಲ್ಲಿ ಸದರಿ ವರದಿಯಲ್ಲಿರುವ ಶಿಫಾರಸ್ಸುಗಳನ್ನು ಸರ್ಕಾರ ಯಾವಾಗ ಜಾರಿಗೆ ತರುವುದು ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಇಲ್ಲ,

ಆ) ಹೌದು.

ಇ) ಅರ್ಹ ನೌಕರರ ಸೇವೆಯನ್ನು ಕ್ರಮಬದ್ಧಗೊಳಿಸಲು ಸರ್ಕಾರವು ಈಗ ತೀರ್ಮಾನ ತೆಗೆದುಕೊಂಡಿದೆ.

ಆಥಣಿ ಕ್ಷೇತ್ರದಲ್ಲಿರುವ ಆಸ್ಪತ್ರೆಗಳಿಗೆ ಸೌಲಭ್ಯ ಒದಗಿಸುವುದು.

೭೬೧. ಶ್ರೀಮತಿ ಲೀಲಾವತಿ ಆರ್. ಪ್ರಸಾದ್ (ಆಥಣಿ). —ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಆಥಣಿ ವಿಧಾನಸಭಾ ಕ್ಷೇತ್ರದಲ್ಲಿ ಹಾಗೂ ಆಥಣಿ ತಾಲೂಕಿನ ಕಾಗವಾಡ ಕ್ಷೇತ್ರದಲ್ಲಿ ಇರುವ ಆಸ್ಪತ್ರೆ ಸೌಲಭ್ಯಗಳ ವಿವರಗಳೇನು ? ಹಾಗೂ ಸಂಖ್ಯೆ ಎಷ್ಟು ?

ಆ) ಆಥಣಿ ಪಟ್ಟಣ ಒಳಗೊಂಡಂತೆ ಆಥಣಿ ವಿಧಾನ ಸಭಾ ಕ್ಷೇತ್ರದಲ್ಲಿ ಎಲ್ಲಿಯೂ ಸುಸಜ್ಜಿತ ಆಸ್ಪತ್ರೆ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು.

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) —

ಅ) ಆಥಣಿ ತಾಲೂಕು ಹಾಲಿ ಮೂರು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಹತ್ತು ಪ್ರಾಥಮಿಕ ಆರೋಗ್ಯ ಘಟಕಗಳ ಸೌಲಭ್ಯಗಳನ್ನು ಹೊಂದಿರುತ್ತದೆ. ಕಾಗವಾಡ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವು ಕೆಲಸ ನಿರ್ವಹಿಸುತ್ತಾ ಇದೆ.

ಆ) ಬಂದಿದೆ.

ಇ) ಈ ಆಸ್ಪತ್ರೆಯನ್ನು ಭಾರತ ಜನ ಸಂಖ್ಯಾ ಯೋಜನೆ-೩ (ಕರ್ನಾಟಕ) ಈ ಯೋಜನೆಯಲ್ಲಿ ಹಾಸಿಗೆಗಳ ಆಸ್ಪತ್ರೆಯನ್ನಾಗಿ ಪರಿವರ್ತಿಸಲಾಗುವುದು.